ಗೊಳಿಸಬೇಕೆಂದು ಮಂಗಳೂರು ಮಹಾನಗರ ಪಾಲಿಕೆಯ ಸರ್ವ ಸಮ್ಮತಿಯ ನಿರ್ಣಯವು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಬಡ ಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ಸುಪ್ರಿಂಕೋರ್ಟಿನ ಆದೇಶದಂತೆ ತಕ್ಷಣ ಕ್ರಮಕೈಗೊಳ್ಳುವುದೇ?

ಶ್ರೀ ಮೀರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು):

ಅ) ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ.

(2) ವರದಿಯನ್ನು ಮಂಡಿಸುವುದು:

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ): 1996-97 ಮತ್ತು 1997-98ನೇ ಸಾಲಿನಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮ ಮತ್ತು ಅವುಗಳ ಅನುಷ್ಠಾನದ ಬಗೆಗಿನ ಇಪ್ಪತ್ತನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಯಿತು.

(3) ಅರ್ಜಿಗಳನ್ನು ಒಪ್ಪಿಸುವುದು:

ಶ್ರೀ ಮಂಜುನಾಥ್ ಸಿ.ಕುನ್ನೂರು (ಶಿಗ್ಗಾಂವ್): ಅಧ್ಯಕ್ಷರೆ, ಶಿಗ್ಗಾಂವ್ ತಾಲ್ಲೂಕು ಬಂಕಾಪುರದಲ್ಲಿರುವ ಸರ್ಕಾರಿ ಪದವಿ ಕಾಲೇಜು ಕಟ್ಟಡಕ್ಕೆ ಸರ್ಕಾರದಿಂದ ಅನುದಾನ ಮಂಜೂರಾತಿ ಬಗ್ಗೆ ಕೋರಿ ಅಲ್ಲಿನ ನಾಗರೀಕರು ಬರೆದಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಅರ್ಜಿಯನ್ನು ಒಪ್ಪಿಸಲಾಯಿತು.

(4) ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: (ಅ) ಮಹಾರಾಷ್ಟ್ರದಿಂದ ವೇದಗಂಗಾ ನದಿಗೆ ನೀರು ಬಿಡುವುದರ ಬಗ್ಗೆ

+ ಶ್ರೀ ನಾಯಕ ಚಂದ್ರಶೇಖರ ಸದಾಶಿವ (ಗೋಕಾಕ್): ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವೇದಂಗಂಗಾ ಮತ್ತು ದೂದಗಂಗಾಕ್ಕೆ ನೀರು ಬಿಡುವಂಥ ಪ್ರಶ್ನೆ. ಈಗಾಗಲೇ ದೂದಗಂಗಾಕ್ಕೆ ಮಹಾರಾಷ್ಟದವರು ಫ್ರೀಯಾಗಿ